# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-277/2018/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 19/02/2020

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ನರೇಗಾ ಯೋಜನೆಯಡಿಯಲ್ಲಿ 'ನಮ್ಮ ಹೊಲ ನಮ್ಮ ದಾರಿ' ಕಾಮಗಾರಿ ಹೆಸರಿನಲ್ಲಿ ಮಾಡಿರುವ ಕಾಮಗಾರಿಗೆ ಸಂಬಂಧವಾಗಿ ಹಾಗೂ ಶೌಚಾಲಯ ಕಟ್ಟಿದ್ದ ಬಾಬ್ತು ಬಿಲ್ಲನ್ನು ಅಗತ್ಯ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಪಾವತಿಸಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಅಶ್ವತ್ಥಪ್ಪ ಬಿನ್ ನಾಗಪ್ಪ, ಬ್ರಹ್ಮದೇವರಹಳ್ಳಿ, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ರಂಗನಾಥ್, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚನ್ನೇನಹಳ್ಳಿ ಗ್ರಾಮ ಪಂಚಾಯತ್, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು, (2) ಗಣಕಯಂತ್ರ ಸಹಾಯಕರು, ಚನ್ನೇನಹಳ್ಳಿ ಗ್ರಾಮ ಪಂಚಾಯತ್, ಮಿಡಿಗೇಶಿ ಹೋಬಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ದ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದೂರುದಾರರು ನರೇಗಾ ಯೋಜನೆಯಡಿ ಹೊಲದಲ್ಲಿ ದಾರಿ ಮಾಡಲು ಕಾಮಗಾರಿ ಮಾಡಿದ್ದು, ಈ ಸಂಬಂಧವಾಗಿ ರೂ.40,000/- ಹಾಗೂ ಶೌಚಾಲಯ ಕಟ್ಟಿದ ಬಾಬ್ತು ಬಿಲ್ಲನ್ನು ಎದುರುದಾರರು ನೀಡದೆ, ಬಿಲ್ಲು ಮಾಡದೆ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ

ಪರಿಶೀಲಿಸಿ ದೂರುದಾರರಿಗೆ ಬಿಲ್ ಹಣ ಪಾವತಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಎದುರುದಾರರಿಗೆ ನಿರ್ದೇಶಿಸಲು ಕೋರಿರುತ್ತಾರೆ.

3. ದೂರಿನ ಜೊತೆಗೆ ದಾಖಲೆಗಳನ್ನು ಹಾಜರುಪಡಿಸಿದ್ದು, ಸರ್ವೆ ನಂ. 224ರಲ್ಲಿ ಸರ್ಕಾರಿ ದಾರಿಯವರೆಗೆ ರೈತರ ರಸ್ತೆ ಅಭಿವೃದ್ಧಿಯ ಕಾಮಗಾರಿಯನ್ನು ಕೈಗೊಂಡಿದ್ದು, ಆ ಬಗ್ಗೆ ಪಂಚಾಯತಿಯವರು ಎಸ್ಟಿಮೇಟ್ ತಯಾರಿಸಿ ವರದಿ ಸಲ್ಲಿಸಿರುತ್ತಾರೆ. ಆದರೆ ಸದರಿ ಕಾಮಗಾರಿಯ ಬಿಲ್ಲನ್ನು ಎದುರುದಾರರು ನೀಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

4. ಎದುರುದಾರರಿಗೆ ಆಕ್ಷೇಪಣೆ ಸಲ್ಲಿಸಲು ದಿನಾಂಕ: 02/07/2008 ರಿಂದ 03/01/2019 ರವರೆಗೆ ಸಾಕಷ್ಟು ಕಾಲಾವಕಾಶ ನೀಡಿದ್ದರೂ ಸಹಿತ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ.

5. ದೂರುದಾರರು ಹಾಜರುಪಡಿಸಿರುವ ಮಧುಗಿರಿ ತಾಲ್ಲೂಕು ಚಿನ್ನೇನಹಳ್ಳಿ ಗ್ರಾಮ ಪಂಚಾಯತಿಯ 2017-18 ಎಂ.ಜಿ.ಎನ್.ಆರ್. ಇ.ಜಿ.ಎ. ಯೋಜನೆಯ ಮುಖ್ಯ ಮಂತ್ರಿಗಳ 21 ಅಂಶಗಳ ಯೋಜನೆಯ ಹೆಚ್ಚುವರಿ ಕ್ರಿಯಾ ಯೋಜನೆಯನ್ನು ಪರಿಶೀಲಿಸಿದಾಗ, ಬ್ರಹ್ಮದೇವರಹಳ್ಳಿ ನಮ್ಮ 'ಹೊಲ ನಮ್ಮ ದಾರಿ' ಕಾಮಗಾರಿ ಹೆಸರು ಬ್ರಹ್ಮದೇವರಹಳ್ಳಿ ಕಾವಲ್ ಗ್ರಾಮದ ಅಶ್ವಥಪ್ಪನವರ ಸರ್ವೆ ನಂ. 224ರ ಜಮೀನಿನಿಂದ ಸರ್ಕಾರಿ ದಾರಿಯವರೆಗೆ ರೈತರ ರಸ್ತೆ ಅಭಿವೃದ್ಧಿ ಒಟ್ಟು ರೂ. 1 ಲಕ್ಷ ಕ್ರಿಯಾ ಯೋಜನೆಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಧುಗಿರಿ ರವರು ತಯಾರಿಸಿದ್ದಾರೆ ಎಂಬುದು ಕಂಡುಬರುತ್ತದೆ.

6. ಸಂ. ತು.ಜಿ.ಪಿ./ಅಭಿ/ನರೇಗ/164/2017-18, ದಿನಾಂಕ: 21/08/2017ರ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ರವರು ಕಾರ್ಯನಿವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಮಧುಗಿರಿ ರವರಿಗೆ ಬರೆದ ಪತ್ರವನ್ನು ಪರಿಶೀಲಿಸಲಾಗಿ, ಇದೇ ದೂರುದಾರರು 'ನಮ್ಮ ಹೊಲ ನಮ್ಮ ದಾರಿ' ಕಾಮಗಾರಿ ಪೂರ್ಣಗೊಂಡಿದ್ದು, ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ಲನ್ನು ಮಂಜೂರು ಮಾಡದೇ ವಿನಾ: ಕಾರಣ ತೊಂದರೆ ನೀಡುತ್ತಿರುವರು ಎಂಬ ದೂರನ್ನು ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರಿಗೆ ಸಲ್ಲಿಸಿದ್ದು, ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಿದ್ದಾರೆ. ಈ ಕುರಿತು ದಿನಾಂಕ ನಿಗಧಿಪಡಿಸಿ ಸ್ಥಳಕ್ಕೆ

ಭೇಟಿ ನೀಡಿ ದೂರುದಾರರ ಸಮಕ್ಷಮ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಮಾರ್ಗಸೂಚಿ ನಿಯಮಾನುಸಾರ ಅಗತ್ಯ ಕ್ರಮ ವಹಿಸಿ ತನಿಖಾ ವರದಿ ಸಲ್ಲಿಸುವಂತೆ ತಿಳಿಸಿದ್ದಾರೆ. ಹೀಗಿದ್ದರೂ ಸಹಿತ, ದೂರುದಾರರ ಕುಂದುಕೊರತೆ ನಿವಾರಣೆಯಾಗಿಲ್ಲ ಎಂಬುದು ಈ ದೂರಿನಿಂದ ಕಂಡುಬರುತ್ತದೆ.

7. ದೂರುದಾರರು ಮಾಡಿರುವ ಆಪಾದನೆಯನ್ನು ನಿರಾಕರಿಸಲು ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ. ಏಕೆಂದರೆ, ಎದುರುದಾರರಿಗೆ ದೂರುದಾರರ ದೂರಿನ ಪ್ರತಿ ಮತ್ತು ದಾಖಲೆ ಕಳುಹಿಸಿ ಆಕ್ಷೇಪಣೆ ಸಲ್ಲಿಸುವಂತೆ ಪತ್ರ ಹಾಗೂ ನೆನಪೋಲೆಗಳನ್ನು ಹಲವಾರು ಬಾರಿ ಕಳುಹಿಸಿದ್ದರೂ ಸಹಿತ, ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ. ಈಗಾಗಲೇ ದೂರುದಾರರು ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರಿಗೆ ದೂರು ನೀಡಿದ್ದರೂ ಸಹಿತ ಯಾವುದೇ ರೀತಿಯಿಂದ ಪ್ರಯೋಜನ ಆಗಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ದೂರುದಾರರು ತಮ್ಮ ದೂರಿನಲ್ಲಿ ತಿಳಿಸಿದಂತೆ ನರೇಗಾ ಯೋಜನೆಯಡಿಯಲ್ಲಿ 'ನಮ್ಮ ಹೊಲ ನಮ್ಮ ದಾರಿ' ಕಾಮಗಾರಿ ಹೆಸರಿನಲ್ಲಿ ಮಾಡಿರುವ ಕಾಮಗಾರಿಗೆ ಸಂಬಂಧವಾಗಿ ಹಾಗೂ ಶೌಚಾಲಯ ಕಟ್ಟಿದ್ದ ಬಾಬ್ತು ಬಿಲ್ಲನ್ನು ಅಗತ್ಯ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಪಾವತಿಸುವಂತೆ ನಿರ್ದೇಶಿಸಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

19-2-20

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**